**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ., ಮೂಡಿಗೆರೆ.</u>**

<u>ಸಿ.ಸಿ ನಂಬರ್‌ಃ **1069/2018**</u>

<u>ಪಿರ್ಯಾದಿಃ</u> ರಾಜ್ಯ, ಪರವಾಗಿ ಮೂಡಿಗೆರೆ ಪೊಲೀಸ್,
ಮೂಡಿಗೆರೆ.

ವಿರುದ್ಧ

<u>ಆರೋಪಿಃ</u> ಅಬ್ಬಾಸ್ ಯಾನಿ ಇದ್ರಿ ಅಬ್ಬಾಸ್,
ವಯಸ್ಸು ಸುಮಾರು 38 ವರ್ಷ,
ಬಿನ್ ದಿಃ ಮೈದಿನಬ್ಬ,
ವಾಸಃ ಮೊದಲನೇ ಕ್ರಾಸ್,
ಬಾಪುನಗರ, ಹೆಸ್ಗಲ್ ಅಂಚೆ,
ಮೂಡಿಗೆರೆ ತಾಲ್ಲೂಕು.

* * * * *

<u>ದಂಡ ಪ್ರಕ್ರಿಯಾ ಸಂಹಿತೆ **313** ರ ಅಡಿಯಲ್ಲಿ ಮಾಡಿಕೊಳ್ಳಲಾದ ಆರೋಪಿಯ ಹೇಳಿಕೆ</u>

ಪ್ರಶ್ನೆ 1) ಅಭಿಯೋಜನೆಯ ಪರ ಹಾಜರಾದ ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿದ್ದೀರಾ?

ಉತ್ತರಃ

ಪ್ರಶ್ನೆಃ 2) ಫ್ರಾಸಾ-1 ವಾಹಿದ ರವರು ತಮ್ಮ ಸಾಕ್ಷ್ಯದಲ್ಲಿ ಮದುವೆಯಾದ ನಂತರ ತಾನು ಆರೋಪಿಯ ಮನೆಗೆ ಹೋಗಿದ್ದು ಅಲ್ಲಿ ಕೇವಲ 20 ದಿನಗಳು ಮಾತ್ರ ಅನ್ಯೋನ್ಯವಾಗಿದ್ದೆವು, ತದನಂತರ ಆರೋಪಿಯು ತಾನು ಆಟೋ ರಿಕ್ಷಾ ಖರೀದಿ ಮಾಡಬೇಕೆಂದು 1 ಲಕ್ಷ ಕೊಡುವಂತೆ ತನ್ನಲ್ಲಿ ಕೇಳಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 3) ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ತನ್ನ ಅತ್ತೆ ಐಸಮ್ಮ, ಆರೋಪಿ, ಮೈದುನ ಲತೀಫ್, ಭಾವ ಹಸೈನಾರ್ ಹಾಗೂ ಅವರ ಹೆಂಡತಿ ಜೈನಾಬಿ ಹಾಗೂ ಅವರ ಮಕ್ಕಳಾದ ಮುಸ್ತಫ, ಅನೀಫ್ ಮತ್ತು ಅಸ್ಮಾ, ಇನ್ನೊರ್ವ ಭಾವನಾದ ಇಬ್ರಾಹಿಂರವರ ಹೆಂಡತಿ ಜಮೀಲ, ಅವರ ಮಗ ಅಶ್ರಫ್, ನಾದಿನಿ ಮೈಮುನಾ ಹಾಗೂ ಆಕೆಯ ಗಂಡ ಮಹಮ್ಮದ್ ಮುಸ್ಲಿಯಾರ್, ಅವರ ಮಗಳು ನಾಜಿಯರವರೆಲ್ಲರೂ ಸೇರಿ ತನಗೆ ಮಾನಸಿಕ ಮತ್ತು ದೈಹಿಕ ಹಿಂಸೆ ನೀಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 4) ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆ ಬಗ್ಗೆ ತಾನು ಕುಟುಂಬದಲ್ಲಿ

ಹೇಳಿದಾಗ, ಕುಟುಂಬದ ಸದಸ್ಯರು 3 ಬಾರಿ ಪಂಚಾಯಿತಿ ನಡೆಸಿ, ಎಲ್ಲಾ ಸರಿ ಹೋಗುತ್ತದೆ ಸ್ವಲ್ಪ ತಾಳ್ಮೆಯಿಂದ ಇರು ಎಂದು ಹೇಳಿ ಕಳುಹಿಸಿದ್ದು, ಆದರೆ ಅವರೆಲ್ಲರೂ ದೈಹಿಕ ಮತ್ತು ಮಾನಸಿಕ ಹಿಂಸೆಯನ್ನು ಮತ್ತೆ ಮತ್ತೆ ಮುಂದುವರೆಸುತ್ತಿದ್ದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 5) ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ17.03.2011 ರಂದು ಮೇಲೆ ಹೇಳಿದ 13 ಜನರು ಸೇರಿಕೊಂಡು ತನ್ನನ್ನು ಮತ್ತು ತನ್ನ 9 ತಿಂಗಳ ಮಗುವಾದ ಫಾತಿಮಾರವನ್ನು, ತನ್ನ ಮೈಮೇಲಿದ್ದ ಚಿನ್ನವನ್ನು ತೆಗೆದುಕೊಂಡು ಮನೆಯಿಂದ ಹೊರಗೆ ಹಾಕಿ, ಹಣ ತರಬೇಕೆಂದು ಬೇಡಿಕೆ ಇಟ್ಟಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 6) ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ತದನಂತರ ದಿನಾಂಕಃ24.12.2011 ರಂದು ಪುಂಜಲಕಟ್ಟೆಯ ನಂದಗೋಕುಲ ಹಾಲ್‌ನಲ್ಲಿ ಊರ ಹಿರಿಯ ಸಮಕ್ಷಮ ಪಂಚಾಯಿತಿ ಮಾಡಿ ತನ್ನನ್ನು ಆರೋಪಿಯ ಮನೆಗೆ ಕಳುಹಿಸಿಕೊಡುವಂತೆ ತೀರ್ಮಾನವಾಗಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 7) ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆದರೆ ಆರೋಪಿ ತನ್ನನ್ನು ಕರೆದುಕೊಂಡು ಹೋಗಿರುವುದಿಲ್ಲ, ತದನಂತರ ದಿನಾಂಕಃ27.11.2012 ರಂದು ಪುಂಜಲಕಟ್ಟೆಯ ಬದ್ರಿಯಾ ಮಸೀದಿಯವರು ತನ್ನ ಮತ್ತು ಆರೋಪಿಯ ನಡುವಿನ ಸಮಸ್ಯೆಯನ್ನು ಬಗ್ಗೆ ಹರಿಸುವಂತೆ ಮೊಹಿದ್ದೀನ್ ಜುಮ್ಮಾ ಮಸೀದಿರವರಿಗೆ ಕೋರಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 8) ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ08.12.2012 ರಂದು ಆ ಬಗ್ಗೆ ಪಂಚಾಯಿತಿ ನಡೆದು ಎರಡೂ ಕುಟುಂಬದವರನ್ನು ಸೇರಿಸಿ ತನ್ನನ್ನು ಆರೋಪಿಯ ಮನೆಗೆ ಕರೆದುಕೊಂಡು ಹೋಗುವಂತೆ ತೀರ್ಮಾನವಾಯಿತು, ಆದರೆ ಆರೋಪಿ ನನ್ನನ್ನು ಕರೆದುಕೊಂಡು ಹೋಗಲಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 9) ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆ ಸಂದರ್ಭದಲ್ಲಿ ಆರೋಪಿ ನೀನು ಈಗ ನಿನ್ನ ತಾಯಿಯ ಮನೆಗೆ ಹೋಗು, ಹಣ ತರದೆ ನಿನ್ನನ್ನು ನಮ್ಮ ಮನೆಗೆ ಸೇರಿಸುವುದಿಲ್ಲ ಹಾಗೂ ಪ್ರತ್ಯೇಕ ಮನೆ ಮಾಡಿದ ನಂತರ ಕರೆದುಕೊಂಡು ಹೋಗುತ್ತೇನೆ ಎಂದು ಹೇಳಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 10) ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆದರೆ ತಾನು ಸಾಕಷ್ಟು ಸಮಯ ಕಾದರು ಸಹ ಆರೋಪಿ ತನ್ನನ್ನು ಪ್ರತ್ಯೇಕ ಮನೆ ಮಾಡಿ ಕರೆದುಕೊಂಡು ಹೋಗಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 11) ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆದಕಾರಣ ತಾನೇ ಆರೋಪಿಯ ಮನೆಗೆ ಹೋದಾಗ ತನ್ನ ಅತ್ತೆ ಐಸಮ್ಮ ಮತ್ತು ಭಾವ ಹಸೈನಾರ್ ರವರುಗಳು ಹಣ ತರದೆ ಮನೆಯೊಳಗೆ ನುಗ್ಗಿದರೆ ಕೈಕಾಲು ಮುರಿದು ಹಾಕುತ್ತೇವೆ ಎಂದು ತನ್ನನ್ನು ಮನೆಯ ಒಳಗಡೆ ಹೋಗಲು ಬಿಟ್ಟಿರುವುದಿಲ್ಲ, ತದನಂತರ 2018 ರಲ್ಲಿ ಆರೋಪಿ ಬೇರೆ ಮದುವೆಯಾಗಿರುವ ಬಗ್ಗೆ ತನಗೆ ಗೊತ್ತಾಯಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 12) ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ13.06.2018 ರಂದು ಸಂಜೆ 4.00 ಗಂಟೆಗೆ ತಾನು ತನ್ನ ತಾಯಿಯ ಮನೆಯಲ್ಲಿದ್ದಾಗ ಆರೋಪಿ, ತನ್ನ ಅತ್ತೆ ಐಸಮ್ಮ ಮತ್ತು ಭಾವ ಹಸೈನಾರ್ ಆಟೋದಲ್ಲಿ ಬಂದಿರುತ್ತಾರೆ, ಆಗ ತಾನು ಅರೋಪಿಯನ್ನು 3 ನೇ ಮದುವೆಯಾಗಿರುವ ಬಗ್ಗೆ ವಿಚಾರಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 13) ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆಗ ಆರೋಪಿಯು ತಾನು ಒಂದಲ್ಲ ಇನ್ನೂ 3 ಮದುವೆಯಾಗುತ್ತೇನೆ, ನೀನು ಯಾರು ಕೇಳಲು ಎಂದು ಅವಾಚ್ಯ ಶಬ್ದಗಳಿಂದ ಬೈದು, ತನ್ನ ಮೇಲೆ ಹಲ್ಲೆ ನಡೆಸಿ ಹೋಗಿರುತ್ತಾರೆ. ಇದರಿಂದ ತಾನು ಮಾನಸಿಕವಾಗಿ ನೊಂದಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 14) ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಮರುದಿನ ಆ ಕುರಿತು ಪುಂಜಲಕಟ್ಟೆ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆಯನ್ನು ಪಡೆದು, ತದನಂತರ ಆರೋಪಿಯ ವಿರುದ್ದ ಪುಂಜಲಕಟ್ಟೆ ಪೋಲಿಸ್ ಠಾಣೆಯಲ್ಲಿ ದೂರು ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 15) ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆರೋಪಿಯು ಪೊಲಿಸರು ಕರೆದಾಗ ಪೋಲಿಸ್ ಠಾಣೆಗೆ ಬಂದಿರುವುದಿಲ್ಲ, ಆದಕಾರಣ ದಿನಾಂಕಃ02.07.2018 ರಂದು ಮಹಿಳಾ ಸಾಂತ್ವನ ಕೇಂದ್ರ, ಬೆಳ್ತಂಗಡಿಯಲ್ಲಿ ದೂರು ದಾಖಲಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 16) ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ16.07.2018 ರಂದು ಸದರಿ ಸಾಂತ್ವನ ಕೇಂದ್ರದವರು ವಿಚಾರಣೆ ಮಾಡಿದಾಗ ಆರೋಪಿಯು ಮತ್ತೊಂದು ಮದುವೆಯಾಗಿರುವುದನ್ನು ಒಪ್ಪಿಕೊಂಡಿದ್ದು, ಹಾಗೂ ತನ್ನ ನಿರ್ಧಾರವನ್ನು ಹೇಳಲು ಒಂದು ವಾರ ಸಮಯ ತೆಗೆದುಕೊಂಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 17) ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ತದನಂತರ ಯಾವುದೇ ಸಂಪರ್ಕಕ್ಕೆ ಸಿಗದೇ ತಪ್ಪಿಸಿಕೊಂಡಿರುತ್ತಾರೆ, ಕಾರಣ ತಾನು ದಿನಾಂಕಃ01.08.2018 ರಂದು ಮೂಡಿಗೆರೆ ಪೋಲಿಸ್ ಠಾಣೆಯಲ್ಲಿ ದೂರು ದಾಖಲಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 18) ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ಪೋಲಿಸರು ಚಿಕ್ಕಮಗಳೂರಿನ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಕೌನ್ಸಲಿಂಗ್‌ಗೆ ತನ್ನನ್ನು ಕಳುಹಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 19) ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ10.08.2018 ರಂದು ಅಲ್ಲಿ ಕೌನ್ಸಲಿಂಗ್ ನಡೆದಾಗ ಆರೋಪಿಯು ತನಗೆ ಅಥವಾ ತನ್ನ ಮಗುವಿಗೆ ಜೀವನಾಂಶ ನೀಡಲು

ಒಪ್ಪಿರುವುದಿಲ್ಲ, ಆ ಕಾರಣ ಸದರಿ ಕಾನೂನು ಸೇವಾ ಪ್ರಾಧಿಕಾರ ಮುಂದಿನ ಕಾನೂನು ಕ್ರಮ ತೆಗೆದುಕೊಳ್ಳುವಂತೆ ತನಗೆ ಸೂಚಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 20) ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ತದನಂತರ ದಿನಾಂಕಃ29.08.2018 ರಂದು ಮೂಡಿಗೆರೆ ಪೋಲಿಸ್ ಠಾಣೆಯಲ್ಲಿ ತಾನು ಮತ್ತೊಂದು ದೂರು ದಾಖಲಿಸಿರುತ್ತೇನೆ, ದೂರು ದಾಖಲಾದ ನಂತರ ಪೋಲಿಸರು ಮೂಡಿಗೆರೆಯ ಬಾಪುನಗರದ ಸಂತೆಮೈದಾನದ ಆರೋಪಿಯ ಮನೆಯಲ್ಲಿ ಮಹಜರ್ ಮಾಡಿ ಪಂಚನಾಮೆಯನ್ನು 10.45 ರಿಂದ 11.45 ರವರೆಗೆ ಬರೆದು, ತನ್ನ ಸಹಿ ಪಡೆದು, ಫೋಟೋ ತೆಗೆದು, ಕಚ್ಚಾ ನಕಾಶೆಯನ್ನು ತೆಗೆದಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 21) ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ಕಾಲಕ್ಕೆ ಚಾಸಾ 8 ಮತ್ತು 9 ರವರು ಸಹ ಹಾಜರಿದ್ದರು, ದಿನಾಂಕಃ01.09.2018 ರಂದು ಪೋಲಿಸರು ಮಧ್ಯಾಹ್ನ 12.15 ರಿಂದ 1.00 ಗಂಟೆಯವರೆಗೆ ಮಹಜರ್ ಮಾಡಿ, ಮದುವೆ ಕಾಲದಲ್ಲಿ ತೆಗೆದಿದ್ದ ಫೋಟೋಗಳನ್ನು ಹಾಗೂ ಮದುವೆಗೆ ಸಂಬಂಧಿಸಿದ ದಾಖಲಾತಿಗಳನ್ನು ತನ್ನಿಂದ ವಶಪಡಿಸಿಕೊಂಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 22) ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ಪಂಚನಾಮೆಗೆ ತಾನು ಸಹ ಸಹಿ ಹಾಕಿದ್ದು, ಅದನ್ನು ಚಾಸಾ 8 ಮತ್ತು 9 ರವರ ಸಮಕ್ಷಮ ಮಾಡಲಾಗಿರುತ್ತದೆ, ತದನಂತರ ಅದೇ ದಿನ ಪೋಲಿಸರು ತನ್ನ ಮರುಹೇಳಿಕೆಯನ್ನು ಪಡೆದಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 23) ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ12.09.2018 ರಂದು ಪೋಲಿಸರು ಪುಂಜಲಕಟ್ಟೆಯ ತನ್ನ ತಾಯಿ ಮನೆಗೆ ಬಂದಿದ್ದು ಅಲ್ಲಿ ಮಧ್ಯಾಹ್ನ 12.30 ರಿಂದ 1.30 ರ ಅವಧಿಯಲ್ಲಿ ಮಹಜರ್ ಮಾಡಿ ತನ್ನ ಸಹಿ ಪಡೆದಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 24) ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ಕಾಲಕ್ಕೆ ಚಾಸಾ 8 ಮತ್ತು 10 ಪಂಚರಾಗಿ ಹಾಜರಿದ್ದರು, ಪೋಲಿಸರು ಆರೋಪಿಯ ಸಂಬಂಧಿಕರನ್ನು ದೋಷಾರೋಪಣಾ ಪಟ್ಟಿಸಲ್ಲಿಸುವಾಗ ಕೈಬಿಟ್ಟಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 25) ಫ್ರಾಸಾ2-ಅಬ್ದುಲ್ ರವರು ತಮ್ಮ ಸಾಕ್ಷ್ಯದಲ್ಲಿ ಆರೋಪಿಯ ಬೇಡಿಕೆಯಂತೆ ಮದುವೆ ಸಮಯಕ್ಕೆ ಅವರಿಗೆ ರೂ.3 ಲಕ್ಷ ಹಣ, ರೂ.15,000/- ವಾಚ್, ಒಂದು ಜೊತೆ ಸೂಟ್ ನ್ನು ವರದಕ್ಷಿಣೆಯಾಗಿ ಪಡೆದಿದ್ದಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 26) ಫ್ರಾಸಾ-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆರೋಪಿಯ ಮಾತಿನಂತೆ ಚಾಸಾ-1 ರವರಿಗೆ 80 ಗ್ರಾಂ ಚಿನ್ನದ ನೆಕ್ಲೇಸ್, 25 ಗ್ರಾಂ ನ ಮತ್ತೊಂದು ಚಿನ್ನದ ನೆಕ್ಲೇಸ್, 64 ಗ್ರಾಂ ನ ಚಿನ್ನದ ಸೊಂಟಪಟ್ಟಿ, 56 ಗ್ರಾಂ 4 ಚಿನ್ನದ ಬಳೆಗಳು, 14 ಗ್ರಾಂ ನ ಒಂದು ಜೊತೆ ಚಿನ್ನದ ಓಲೆ. ಹೀಟೆ ಒಟ್ಟು ಸುಮಾರು ಸುಮಾರು 240 ಗ್ರಾಂ ಚಿನ್ನವನ್ನು ಹಾಕಿದ್ದೆವು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 27) ಫ್ರಾಸಾ-2 ರವರು ಮುಂದುವೆದು ತಮ್ಮ ಸಾಕ್ಷ್ಯದಲ್ಲಿ ಮದುವೆ ಕಾಲಕ್ಕೆ ಊಟಉಪಚಾರದ ಖರ್ಚು ರೂ.63,000/- ಹಣವನ್ನು ನಾವೇ ಬರಿಸಿದ್ದೇವೆ, ಮದುವೆ ನಂತರ ಚಾಸಾ-1 ರವರು ಆರೋಪಿಯೊಂದಿಗೆ ಅವರ ಮನೆಯಲ್ಲಿ ವಾಸಿಸುತ್ತಿದ್ದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 28) ಫ್ರಾಸಾ-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ 20 ದಿನಗಳ ಕಾಲ ಅನ್ಯೂನ್ಯವಾಗಿದ್ದರು. ಆನಂತರ ಆರೋಪಿ ಆಟೋ ಖರೀದಿಸುವ ಕಾರಣಕ್ಕಾಗಿ ರೂ.1 ಲಕ್ಷ ಹಣವನ್ನು ಬೇಡಿಕೆ ಇಟ್ಟರು, ಈ ವಿಚಾರವನ್ನು ಚಾಸಾ-1 ರವರು ತಮಗೆ ತಿಳಿಸಿದ್ದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆ: 29) ಫ್ರಾಸಾ-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ತಮಗೆ ಸಾಲ ಇದ್ದ ಕಾರಣ ಆರೋಪಿಗೆ ಹಣ ಕೊಡಲಾಗಿಲ್ಲ, ಈ ಕಾರಣ ಆರೋಪಿ ಚಾಸಾ-1 ರವರಿಗೆ ವರದಕ್ಷಿಣೆ ಕಿರುಕುಳ ಕೊಡಲು ಪ್ರಾರಂಭಿಸಿದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆ: 30) ಫ್ರಾಸಾ-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಈ ಕಾರಣ ಚಾಸಾ-1 ರವರು 3 ಬಾರಿ ತವರು ಮನೆಗೆ ಬಂದಿದ್ದರು. ಹಾಗೇ ತವರು ಮನೆಗೆ ಬಂದಿದ್ದಾಗ ತಾವು ಚಾಸಾ-1 ರವರಿಗೆ ಬುದ್ದಿ ಹೇಳಿ ಆರೋಪಿಯ ಮನೆಗೆ ಬಿಟ್ಟು ಬಂದಿದ್ದೆವು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆ: 31) ಫ್ರಾಸಾ-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆರೋಪಿಯು ಪದೇಪದೇ ಚಾಸಾ-1 ರವರಿಗೆ ಕಿರುಕುಳ ನೀಡುತ್ತಿದ್ದ ಕಾರಣ ದಿ.17.03.2011 ರಂದು ಆರೋಪಿಯು ಚಾಸಾ-1 ಮತ್ತು ಅವರ ಮಗಳನ್ನು ಹಣ ತೆಗೆದುಕೊಂಡು ಬರುವಂತೆ ಮನೆಯಿಂದ ಹೊರಗೆ ಹಾಕಿದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆ: 32) ಫ್ರಾಸಾ-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಈ ವಿಚಾರವನ್ನು ತಮಗೆ ತಿಳಿಸಿದ್ದ ಕಾರಣ ಚಾಸಾ-6 ರವರನ್ನು ಮೂಡಿಗೆರೆಗೆ ಕಳುಹಿಸಿ ಚಾಸಾ-1 ರವರನ್ನು ವಿಚಾರಿಸುವಂತೆ ಹೇಳಿದ್ದೆವು, ಚಾಸಾ-6 ರವರು ಮೂಡಿಗೆರೆಗೆ ಬಂದಿದ್ದಾಗ ಆರೋಪಿಯು ತನಗೆ ಹಣ ಕೊಡದಿದ್ದರೆ ಚಾಸಾ-1 ಮತ್ತು ಮಗುವನ್ನು ಮನೆಗೆ ಸೇರಿಸುವುದಿಲ್ಲ ಎಂದು ಹೇಳಿದ್ದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆ: 33) ಫ್ರಾಸಾ-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿ.24.12.2011 ರಂದು ಪುಂಜಾಲಕಟ್ಟೆಯ ನಂದಗೋಕುಲ ಹಾಲ್ ನಲ್ಲಿ ಎರಡು ಕಡೆಯ ಹಿರಿಯರನ್ನು ಸೇರಿಸಿ ಪಂಚಾಯಿತಿ ಮಾಡಿಸಿದ್ದೆವು, ಅಲ್ಲಿ ಚಾಸಾ-1 ರವರನ್ನು ತನ್ನೊಂದಿಗೆ ಕರೆದುಕೊಂಡು ಹೋಗಲು ಆರೋಪಿಗೆ ತಿಳಿಸಿದ್ದರೂ ಸಹಾ ಆರೋಪಿ ಕರೆದುಕೊಂಡು ಹೋಗಲಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 34) ಫ್ರಾಸಾ-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿ.27.11.2012 ರಂದು ಪುಂಜಾಲಕಟ್ಟೆ ಮಸೀದಿಯವರು ಮೂಡಿಗೆರೆ ಬಾಬು ನಗರ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 35) ಫ್ರಾಸಾ-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಮಸೀದಿಯವರಿಗೆ ಪತ್ರ ಬರೆದು ಆರೋಪಿ ಮತ್ತು ಚಾಸಾ-1 ರವರು ಸಮಸ್ಯೆ ಬಗೆಹರಿಸಲು ಕೇಳಿದ್ದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 36) ಫ್ರಾಸಾ-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿ.08.12.2012 ರಂದು ಮೂಡಿಗೆರೆ ಮಸೀದಿಯವರು ಆ ಅರ್ಜಿಯನ್ನು ವಿಚಾರಣೆಗೆ ತೆಗೆದುಕೊಂಡು ಚಾಸಾ-1 ರವರನ್ನು ತನ್ನೊಂದಿಗೆ ಕರೆದುಕೊಂಡು ಬರುವಂತೆ ಆರೋಪಿಗೆ ಹೇಳಿದ್ದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 37) ಫ್ರಾಸಾ-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆ ಸಮಯಕ್ಕೆ ಬೇರೆ ಮನೆ ಮಾಡಿ ಚಾಸಾ-1 ರವರನ್ನು ಕರೆದುಕೊಂಡು ಬರುತ್ತೇನೆ ಎಂದು ಹೇಳಿದ್ದರು, ಆದರೆ ಆ ಪ್ರಕಾರ ನಡೆದುಕೊಂಡಿಲ್ಲ, ಆನಂತರ ಆರೋಪಿಯು ಮತ್ತೊಂದು ಮದುವೆಯಾಗಿದ್ದಾರೆ ಎಂದ ತಮಗೆ ತಿಳಿದುಬಂತು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 38) ಫ್ರಾಸಾ-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿ.13.06.2018 ರಂದು ಆರೋಪಿಯು ತಮ್ಮ ಮನೆಗೆ ಬಂದಾಗ 2 ನೇ ಮದುವೆಯ ಬಗ್ಗೆ ಪ್ರಶ್ನಿಸಿದಾಗ ಅವರಿಗೆ ಅವಾಚ್ಯ ಶಬ್ದಗಳಿಂದ ಬೈದು ಹಲ್ಲೆ ಮಾಡಿ ಹೋದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 39) ಫ್ರಾಸಾ-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆ ಸಮಯಕ್ಕೆ ಚಾಸಾ-1 ರವರು ಅಸ್ವಸ್ಥರಾಗಿದ್ದ ಕಾರಣ ಅವರನ್ನು ಪುಂಜಾಲಕಟ್ಟೆಯ ಸರ್ಕಾರಿ ಆಸ್ಪತ್ರೆಗೆ ಸೇರಿಸಿ, ದಿ.14.06.2018 ರಂದು ಚಾಸಾ-1 ರವರು ಆರೋಪಿಯ ವಿರುದ್ಧ ಪುಂಜಾನಲಕಟ್ಟೆಯ ಪೋಲಿಸ್ ಠಾಣೆಗೆ ದೂರು

ನೀಡಿದ್ದಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 40) ಫ್ರಾಸಾ-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ಪೋಲಿಸರು ಆರೋಪಿಯನ್ನು ವಿಚಾರಣೆಗೆ ಕರೆದರು ಅವರು ಬಂದಿರಲಿಲ್ಲ, ದಿ.02.07.2018 ರಂದು ಚಾಸಾ-1 ರವರು ಬೆಳ್ತಂಗಡಿಯ ಮಹಿಳಾ ಸಾಂತ್ವಾನ ಕೇಂದ್ರಕ್ಕೆ ದೂರು ಕೊಟ್ಟಿದ್ದಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 41) ಫ್ರಾಸಾ-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿರವರು ದಿ.16.07.2018 ರಂದು ಎರಡೂ ಕಡೆಯವರನ್ನು ವಿಚಾರಣೆಗೆ ಕರೆಸಿದ್ದು ಅಲ್ಲಿ ಆರೋಪಿಯು ಒಂದು ವಾರದೊಳಗೆ ನಿರ್ಧಾರ ತಿಳಿಸುತ್ತೇನೆ ಎಂದು ಹೇಳಿ ನಂತರ ಯಾವುದೇ ಪ್ರತಿಕ್ರಿಯೇ ನೀಡಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 42) ಫ್ರಾಸಾ-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಈ ಕಾರಣ ದಿ.01.08.2018 ರಂದು ಚಾಸಾ-1 ರವರು ಮೂಡಿಗೆರೆ ಪೋಲಿಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ, ಪೋಲಿಸರು ಇಬ್ಬರನ್ನು ವಿಚಾರಣೆ ಮಾಡಿದ್ದು ಅವರು ಯಾವುದೇ ನಿರ್ಧಾರಕ್ಕೆ ಬರದ ಕಾರಣ ಪ್ರಕರಣ ದಾಖಲಿಸಿದ್ದಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 43) ಫ್ರಾಸಾ3-ಅನೀಫ್ ರವರು ತಮ್ಮ ಸಾಕ್ಷ್ಯದಲ್ಲಿ ದಿ.01.09.2018 ರಂದು ಮೂಡಿಗೆರೆ ಬಾಪುನಗರದ ಚಾಸಾ-1 ರವರ ಅತ್ತೆ ಮನೆಯಲ್ಲಿ ಪೋಲಿಸರು ಮಹಜರ್ ಬರೆದು ನಿಪಿ-4 ಮತ್ತು 5 ರ ಫೋಟೋಗಳನ್ನು ತೆಗೆದಿದ್ದಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 44) ಫ್ರಾಸಾ-3 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ಮಹಜರ್ ಕಾಲಕ್ಕೆ ಚಾಸಾ-9 ರವರು ಸಹಾ ತನ್ನೊಂದಿಗೆ ಇದ್ದು ಪೋಲಿಸರಿಗೆ ಚಾಸಾ-1 ರವರು ಸ್ಥಳ ತೋರಿಸಿದರು, ಸದರಿ ಮಹಜರ್ ನ್ನು ಬೆ.10.45 ರಿಂದ 11.45 ರವರೆಗೂ ಬರೆಯಲಾಗಿದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 45) ಫ್ರಾಸಾ-3 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಅದೇದಿನ ತಮ್ಮನ್ನು ಮೂಡಿಗೆರೆ ಪೋಲಿಸ್ ಠಾಣೆಗೆ ಕರೆದುಕೊಂಡು ಬಂದು ಅಲ್ಲಿ ಚಾಸಾ-1 ರವರ ವಿವಾಹದ ಸಂಬಂಧ ಮಸೀದಿ ಪತ್ರ ಮತ್ತು ಫೋಟೋಗಳನ್ನು ತನ್ನ ಹಾಗೂ ಚಾಸಾ-9 ರವರ ಸಮಕ್ಷಮ ವಶಕ್ಕೆ ಪಡೆದುಕೊಂಡು ಮಹಜರ್ ಬರೆದು ಫೋಟೋಗಳನ್ನು ತೆಗೆದಿದ್ದಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 46) ಫ್ರಾಸಾ-3 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿ.12.09.2018 ರಂದು ಮೂಡಿಗೆರೆ ಪೋಲಿಸರು ಪುಂಜಾರ್ಲಕಟ್ಟೆಯಲ್ಲಿರುವ ಚಾಸಾ-1 ರವರ ತಾಯಿಯ ಮನೆಗೆ ಬಂದು ಅಲ್ಲಿ ತನ್ನ ಹಾಗೂ ಚಾಸಾ-10 ರವರ ಸಮಕ್ಷಮ ಮಹಜರ್ ಬರೆದು ಫೋಟೋಗಳನ್ನು ತೆಗೆದಿದ್ದಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 47) ಫ್ರಾಸಾ-3 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ಮಹಜರ್ ಕಾಲಕ್ಕೆ ಚಾಸಾ-1 ರವರು ಸ್ಥಳ ತೋರಿಸಿದ್ದು, ಆ ಮಹಜರ್ ನ್ನು ಮ.12.30 ರಿಂದ 1.15 ರ ಸಮಯದವರೆಗೂ ಬರೆಯಲಾಗಿದೆ. ಸಾಕ್ಷಿಯು ನಿಪಿ-12 ಮತ್ತು 13 ರ ಫೋಟೋಗಳನ್ನು ನೋಡಿ ಚಾಸಾ-1 ರವರಿಂದ ಪೋಲಿಸರು ವಶಕ್ಕೆ ಪಡೆದ ಫೋಟೋಗಳನ್ನು ಇವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 48) ಫ್ರಾಸಾ4-ರಾಮಚಂದ್ರ.ವೈ.ಪಿ ರವರು ತಮ್ಮ ಸಾಕ್ಷ್ಯದಲ್ಲಿ ದಿ.29.08.2018 ರಂದು ನಾನು ಠಾಣಾ SHO ಕರ್ತವ್ಯದಲ್ಲಿ ಇದ್ದಾಗ ಸ.6.15 ರ ಸಮಯಕ್ಕೆ ಚಾಸಾ-1 ವಹಿದಾರವರು ನೀಡಿದ ದೂರನ್ನು ಪಡೆದು ಅದರಂತೆ ಠಾ.ಮೊ.ಸಂ.142/2018 ರಂತೆ ಕಲಂ.498 ಎ, 506 of IPC and Sec.3 and 4 of DP Act ಪ್ರ.ವ.ವರದಿ ದಾಖಲಿಸಿ ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ನಿವೇದಿಸಿ, ನಂತರ ಪ್ರಕರಣದ ಕಡತವನ್ನು ಮುಂದಿನ ತನಿಖೆ ಸಂಬಂಧ ಚಾಸಾ-18 ರವರಿಗೆ ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 49) ಫ್ರಾಸಾ5-ಎಂ.ಜಗಧೀಶ್ ರವರು ತಮ್ಮ ಸಾಕ್ಷ್ಯದಲ್ಲಿ ದಿ.01.09.2018 ರಂದು ಪ್ರಕರಣದ ಕಡತವನ್ನು ಫ್ರಾಸಾ-4 ರಾಮಚಂದ್ರ ರವರಿಂದ ಪಡೆದು, ಅದೇದಿನ ಕೃತ್ಯ ನಡೆದ ಸ್ಥಳಕ್ಕೆ ಬೇಟಿ ನೀಡಿ, ಚಾಸಾ-8 ಮತ್ತು 9 ರವರ ಸಮಕ್ಷಮ ಬೆ.9.45 ರಿಂದ 11.45 ರವರೆಗೆ ಮಹಜರ್ ಕ್ರಮವನ್ನು ಜರುಗಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 50) ಪ್ರಾಸಾ-5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಅಲ್ಲಿ ಪೋಟೋ ತೆಗೆಸಿ ಕಚ್ಚಾ ನಕ್ಷೆಯನ್ನು ತಯಾರು ಮಾಡಿ, ಅದೇದಿನ ಚಾಸಾ-1 ರವರು ಹಾಜರುಪಡಿಸಿದ ಮದುವೆ ಫೋಟೋ ಮತ್ತು ನಿಖಾ ನಾಮವನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 51) ಪ್ರಾಸಾ-5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಚಾಸಾ-8 ಮತ್ತು 9 ರವರ ಸಮಕ್ಷಮ ಅಮಾನತ್ತು ಮಹಜರ್ ನ್ನು ಠಾಣೆಯಲ್ಲಿ ಜರುಗಿಸಿ, ಅದಕ್ಕೆ ಸಂಬಂಧಪಟ್ಟಂತೆ ಮಾ.ಸಂ.124/2018 ರಂತೆ ತಯಾರಿಸಿ ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 52) ಪ್ರಾಸಾ-5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಅದೇದಿನ ಪ್ರಾಸಾ-1 ವಹಿದಾ, ಪ್ರಾಸಾ-2 ಅಬ್ದುಲ್ಲಾ, ಚಾಸಾ-3 ರಹೀಮಾ ಮತ್ತು ಚಾಸಾ-5 ಮೊಹಮ್ಮದ್ ಹಿದಾಹಿತ್ ಉಲ್ಲಾ, ಚಾಸಾ-6 ಅಬ್ದುಲ್ ರಜಾಕ್, ಚಾಸಾ-4 ಉಮಾ ಅಭೀಬ ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 53) ಪ್ರಾಸಾ-5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿ.06.09.2018 ರಂದು ವಿವಾಹವಾದ ದಾಖಲಾತಿಯನ್ನು ಪ್ರಾಸಾ-1 ರವರಿಂದ ಪಡೆದು ಕಡತಕ್ಕೆ ಅಳವಡಿಸಿ, ಚಾಸಾ-13 ಪಿಡಿಒ ರವರಿಂದ ಆರೋಪಿ ಮನೆಯ ಖಾತಾ ಎಕ್ಟ್ರಾಕ್ಟ್ ನ್ನು ಪಡೆದಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 54) ಪ್ರಾಸಾ-5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಮೂಡಿಗೆರೆ ವಿದ್ಯಾನಗರದ ಮಸೀದಿಯಲ್ಲಿ ವಿವಾದ ವಿಚಾರಣೆಯ ಸಂಬಂಧಪಟ್ಟ ದಾಖಲಾತಿಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 55) ಪ್ರಾಸಾ-5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿ.12.09.2018 ರಂದು

ಫ್ರಾಸಾ-1 ರವರ ಮನೆ ಮಂಜಲಿ ಪಲಿಕೆಗೆ ಬೇಟಿ ನೀಡಿ ಚಾಸಾ-8 ಮತ್ತು 10 ರವರ ಸಮಕ್ಷಮ ಮ.12.30 ರಿಂದ 1.30 ರವರೆಗೂ ಪಂಚನಾಮೆ ಕ್ರಮ ಜರುಗಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 56) ಫ್ರಾಸಾ-5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಅದೇದಿನ ಪುಂಜಾಲಕಟ್ಟೆ ಠಾಣೆಗೆ ಬೇಟಿ ನೀಡಿ NC.No.178/2018 ರ ಕಡತಗಳ ದೃಢೀಕೃತ ನಕಲುಗಳನ್ನು ಪಡೆದಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 57) ಫ್ರಾಸಾ-5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಚಾಸಾ-14 ಮಂಜುನಾಥ್ ರವರಿಂದ ಕ್ಯಾಮೆರಾದಿಂದ ಸಿಡಿಗೆ ಅಳವಡಿಸಿ ಸದರಿರವರಿಂದ ಪ್ರಮಾಣಪತ್ರವನ್ನು ಪಡೆದಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 58) ಫ್ರಾಸಾ-5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿ.17.09.2018 ರಂದು ತನಿಖೆ ಪೂರ್ಣಗೊಳಿಸಿ ಆರೋಪಿಯ ವಿರುದ್ಧ ಸಾಕ್ಷ್ಯಾಧಾರಗಳು ಕಂಡುಬಂದ ಕಾರಣ ನ್ಯಾಯಾಲಯಕ್ಕೆ ದೋ.ಪ. ಸಲ್ಲಿಸಿಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 59) ನೀವು ನ್ಯಾಯಾಲಯಕ್ಕೆ ಹೆಚ್ಚಿಗೆ ಏನಾದರೂ ಹೇಳಲು ಇದೆಯೇ ?

ಉತ್ತರಃ

ಪ್ರಶ್ನೆಃ 60) ನಿಮ್ಮ ಪರ ಸಾಕ್ಷ್ಯ ವಿಚಾರಣೆ ಇದೆಯೇ ?

ಉತ್ತರಃ

(ಮೇಲಿನ ಸಾಕ್ಷಿದಾರರ ಎಲ್ಲಾ ಹೇಳಿಕೆಗಳನ್ನು ಶೀಘ್ರಲಿಪಿಗಾರರಿಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಿ, ಆರೋಪಿತನಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಂಡಿರುತ್ತೇನೆಂದು ದೃಢಪಡಿಸಿಕೊಳ್ಳಲಾಗಿದೆ)

Sd/-

ಮೂಡಿಗೆರೆ<br>
ದಿನಾಂಕಃ 13.07.2026.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಮ್‌ಎಫ್‌ಸಿ<br>
ನ್ಯಾಯಾಲಯ, ಮೂಡಿಗೆರೆ.